ಈ) ಉತ್ತರ ಕರ್ನಾಟಕದ ಒಂದು ಸ್ಥಳದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಲು ಸರ್ಕಾರ ಇಚ್ಚೆ ಹೊಂದಿದ್ದು ಈ ವಿಷಯ ಗೌರವಾನ್ವಿತ ಮುಖ್ಯ ನ್ಯಾಯಾಧೀಶರ ಪರಿಶೀಲನೆಯಲ್ಲಿದೆ

ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಬರುವ ನೀರು ಪೂರೈಕೆ ಮತ್ತು ಒಳಚರಂಡಿ ವ್ಯವಸ್ಥೆಯ ಬಗ್ಗೆ

15 (196) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಬರುವ ನಗರಸಭೆಗಳ ಸಂಖ್ಯೆ ಎಷ್ಟು

ಆ) ಈ ನಗರಸಭಗಳಲ್ಲಿ ಹಾಲಿ ನೀರು ಪೂರೈಕೆಗೆ ಹಾಗೂ ಒಳಚರಂಡಿ ವ್ಯವಸ್ಥೆ ಯೋಜನೆ ಕಾರ್ಯ ಹಮ್ಮಿ ಕೊಳ್ಳಲಾಗಿದೆಯೇ

ಇ) ಯಾವಾಗ ಅನುಷ್ಠಾನಗೊಳಿಸಲಗುತ್ತದೆ ಇದಕ್ಕೆ ಸರ್ಕಾರ ನಿಗದಿಪಡಿಸಿರುವ ಹಣವೆಷ್ಟು

ಈ) ಅನುಷ್ಠಾನಗೊಳಿಸಿದ್ದಲ್ಲಿ ಕಾಮಗಾರಿ ಯಾವ ಹಂತದಲ್ಲಿದೆ ಯಾವಾಗ ಮುಗಿಸಲಾಗುತ್ತದೆ

ಉ) ಈ ನಗರಗಳಿಗೆ ಹಾಲಿ ಕುಡಿಯುವ ನೀರಿನ ಸೌಲಭ್ಯವನ್ನು ಯಾವ ಯೋಜನೆಯಡಿಯಲ್ಲಿ ರೂಪಿಸಲಾಗಿದೆ, ನೀರು ಪೂರೈಕೆ ಸಮರ್ಪಕವಾಗಿದೆಯೇ, ನೀರಿನ ಕೊರತೆ ಇರುವ ಜಾಗಗಳನ್ನು ಗುರುತಿಸಲಾಗಿದೆಯೇ, ಅವು ಯಾವುವು ಈ ಸ್ಥಳಗಳಿಗೆ ಯಾವ ಪರಿಹಾರ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಡಿ ಕೆ ಶಿವಕುಮಾರ್ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಬಿಜಾಪುರ ಜಿಲ್ಲೆ – 1

ಬಾಗಲಕೋಟೆ ಜಿಲ್ಲೆ –2

ಆ) ಹೌದು

ಇ) ಆದಷ್ಟು ಶೀಘ್ರದಲ್ಲಿ ಸುಮಾರು 55 00 ಕೋಟಿ ರೂಗಳು

ಈ) ಇನ್ನೂ ಅನುಷ್ಠಾನಗೊಳಿಸಿರುವುದಿಲ್ಲ

ಉ) ಹಾಲಿ, ಕೃಷ್ಣಾ ನದಿಯಿಂದ ನೀರು ಸರಬರಾಜು ಯೋಜನೆಯನ್ನು ಸ್ಥಳೀಯ ಸಂಸ್ಥೆಗಳ ವಂತಿಗೆ, ಹಣಕಾಸು ಸಂಸ್ಥೆಗಳ ಸಾಲ ಮತ್ತು ಸರ್ಕಾರದ ಸಹಾಯದಲ್ಲಿ ಜಾರಿಗೊಳಿಸಲಾಗಿದೆ ನೀರು ಸರಬರಾಜು ಸಮರ್ಪಕವಾಗಿದೆ ಆದಾಗ್ಯೂ ಇನ್ನೂ ಉತ್ತಮವಾಗಿ ನೀರು ಪೂರೈಸಲು ಎ ಡಿ ಬಿ ನೆರವಿನಿಂದ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ

ನಾಗಮಂಗಲ ತಾಲ್ಲೂಕಿನಲ್ಲಿ ಕೈಗೆತ್ತಿಕೊಂಡಿರುವ ಬರ ಪರಿಹಾರ ಯೋಜನೆಗಳ ಬಗ್ಗೆ

18 (26) ಶ್ರೀ ಚೆಲುವರಾಯಸ್ವಾಮಿ ಎನ್ (ನಾಗಮಂಗಲ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ತಾಲ್ಲೂಕು ಸಣ್ಣ ನೀರಾವರಿ ಇಲಾಖೆಯಿಂದ ಬರ ಪರಿಹಾರ ಯೋಜನೆಯಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ ಎಷ್ಟು ಕಾಮಗಾರಿಗಳನ್ನು ಪೂರೈಸಲಾಗಿದೆ ಹಾಗೂ ಬಾಕಿ ಇರುವ ಕಾಮಗಾರಿಗಳು ಎಷ್ಟು ಈ ಕಾಮಗಾರಿಗೆ ಎಷ್ಟು ಮೊತ್ತ ವಿನಿಯೋಗಿಸಲಾಗಿದೆ ಮತ್ತು ಬಾಕಿ ಇರುವ ಮೊತ್ತ ಎಷ್ಟು

ಆ) ನಾಗಮಂಗಲ ತಾಲ್ಲೂಕಿನಲ್ಲಿ ರೈತ ಕಾಯಕ ಯೋಜನೆ ಅಡಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ ಮತ್ತು ಖರ್ಚು ಆಗಿರುವ ಹಣವೆಷ್ಟು ಹಾಗೂ

ಉಳಿದ ಯೋಜನೆ ಮತ್ತು ಯೋಜನೇತರ ಅಡಿಯಲ್ಲಿ ಯಾವ ಯಾವ ಕಾಮಗಾರಿಯನ್ನು ಯಾವ ಯಾವ ವರ್ಷದಲ್ಲಿ ಕೈಗೆತ್ತಿಕೊಳ್ಳಲಾಗಿದೆ ಹಾಗು ಮುಗಿದಿರುವ ಕಾಮಗಾರಿಗಳೆಷ್ಟು ಬಾಕಿ ಇರುವ ಕಾಮಗಾರಿ ಯಾವಾಗ ಮುಗಿಸಲಾಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) 1ನೇ ಹಂತ ಹಾಗೂ 2ನೇ ಹಂತದಲ್ಲಿ ಒಟ್ಟು 34 ಕಾಮಗಾರಿಗಳನ್ನು ರೂ 60 00 ಲಕ್ಷ ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗಿದ್ದು ಆ ಕಾಮಗಾರಿಗಳಿಗೆ ಒಟ್ಟು ರೂ 14 40 ಲಕ್ಷ ಹಾಗೂ 4 812 ಕ್ವಿಂಟಾಲ್ ಆಹಾರ ಧಾನ್ಯ ಖರ್ಚಾಗಿರುತ್ತದೆ 24 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ರೂ 5 60 ಲಕ್ಷ ಹಾಗೂ 1 588 ಕ್ವಿಂಟಾಲ್ ಆಹಾರ ಧಾನ್ಯ ಬಿಡುಗಡೆ ಆಗಬೇಕಾಗಿದ್ದು, 10 ಕಾಮಗಾರಿಗಳು ಪೂರ್ಣಗೊಳ್ಳುವುದು ಬಾಕಿ ಇರುತ್ತದೆ ವಿವರಗಳನ್ನು ಅನುಬಂಧ–1 ಹಾಗೂ 2 ರಲ್ಲಿ ನೀಡಲಾಗಿದೆ

ಆ) ಬಿಂಡಿಗನ ವಿಲೆ ಕೆರೆ ಅಭಿವೃದ್ಧಿ ಕಾಮಗಾರಿಯನ್ನು ರೂ 29 20 ಲಕ್ಷ ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗಿದ್ದು, ಈ ಕಾಮಗಾರಿಗೆ ಕೂಲಿಗಾಗಿ ಕಾಳು ಯೋಜನೆಯಡಿ 2,075 ಕ್ವಿಂಟಾಲ್ ಆಹಾರಧಾನ್ಯ ಉಪಯೋಗಿಸಲಾಗಿದ್ದು, ರೂ 8 77 885–00 ಹಣ ಬಿಡುಗಡೆಯಾಗಿದ್ದು ಪೂರ್ಣ ರೂ 8,77,885–00ಗಳು ಖರ್ಚಾಗಿರುತ್ತದೆ ಉಳಿಕೆ ರೂ 5 77 ಲಕ್ಷ ಹಣ ಬಿಡುಗಡೆ ಆಗಬೇಕಾಗಿದೆ

2001–02ನೇ ಸಾಲಿನಿಂದ ಈವರೆಗೆ ನಾಗಮಂಗಲ ತಾಲ್ಲೂಕಿನಲ್ಲಿ ಯೋಜನೇತರ ಶೀರ್ಷಿಕೆಯಲ್ಲಿ ಯಾವುದೇ ಕಾಮಗಾರಿ ಕೈಗೊಂಡಿರುವುದಿಲ್ಲ 4702 ಯೋಜನೆ ಶೀರ್ಷಿಕೆಯಲ್ಲಿ 2 ಹೊಸಕೆರೆ ನಿರ್ಮಾಣ ಕಾಮಗಾರಿ ಹಗೂ 6 ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಇವುಗಳಲ್ಲಿ ಒಂದು ಹೊಸಕೆರೆ ಹಾಗೂ 4 ಕೆರೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಂಡಿದ್ದು, 2003–04 ನೇ ಸಾಲಿನ ಆಯವ್ಯಯದಲ್ಲಿ ಅನುಧಾನ ಲಭ್ಯವಾದಲ್ಲಿ ಈ ಎಲ್ಲಾ ಕಾಮಗಾರಿಗಳನ್ನು 2005ನೇ ಮಾರ್ಚ್ ಅಂತ್ಯಕ್ಕೆ ಪೂರ್ಣಗೊಳಿಸಲಾಗುವುದು 4702 ಯೋಜನೆ ಅಡಿ ಕೈಗೊಂಡಿರುವ ಕಾಮಗಾರಿಗಳ ವಿವರಗಳನ್ನು ಅನುಬಂಧ–3ರಲ್ಲಿ ನೀಡಲಾಗಿದೆ

ನಾಗಮಂಗಲ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಬಗ್ಗೆ

19 (27) ಶ್ರೀ ಚಲುವನಾರಾಯಣಸ್ವಾಮಿ ಎನ್ (ನಾಗಮಂಗಲ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನಾಗಮಂಗಲ ಪಟ್ಟಣದ ವ್ಯಾಪ್ತಿಯಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ನೀರು ಸರಬರಾಜು ಆಗುತ್ತಿರುವುದು ನಿಜವೇ

ಆ) ಹಾಗಿದ್ದಲ್ಲಿ ಸಂಪೂರ್ಣ ಪ್ರಮಾಣದಲ್ಲಿ ನೀರು ಸರಬರಾಜು ಆಗದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ

ಇ) ಸಂಪೂರ್ಣವಾಗಿ ನೀರು ಪೂರೈಸಲು ಸರ್ಕಾರದ ಕ್ರಮವೇನು?

ಶ್ರೀ ಎಸ್ ಎಂ ಕೃಷ್ಣ (ಮಾನ್ಯ ಮುಖ್ಯ ಮಂತ್ರಿಗಳು)

ಅ) ಹೌದು

ಆ) ಪ್ರತಿ ದಿನ 2 ದಶಲಕ್ಷ ಲೀಟರ್ ನೀರನ್ನು ನಾಗರೀಕರಿಗೆ ಸರಬರಾಜಾಗುತ್ತಿದ್ದು, ಇದರಿಂದ 20,000 ಜನ ಸಂಖ್ಯೆಗೆ ದಿನಂಪ್ರತಿ ತಲಾ 100 ಲೀಟರ್‌ನಂತೆ ನೀರು ಸರಬರಾಜು ಆದಂತಾಗತ್ತದೆ